ವಾರದ ಪತ್ರ

## ವಿಕೃತಿಯದು ಮುಗಿಯದ ಕಥೆ

ಕಲರ್ಸ್ ಕನ್ನಡ 'ಗಿಣಿರಾಮ'ದ ನೇಹಾ, 'ಕೆಂಡಸಂಪಿಗೆ'ಯ ನಿತ್ಯಾ, 'ಭಾಗ್ಯಲಕ್ಷ್ಮಿ'ಯ ಶ್ರೇಷ್ಠಾ, 'ಕನ್ನಡತಿ'ಯ ವರೂದಿನಿ, 'ಲಕ್ಷಣ'ದ ಶ್ವೇತಾ ಶೂರ್ಪನಖಿಯಂತೆ ಕಾಣಿಸುತ್ತಾರೆ. ಗಿಣಿರಾಮದ ಆಯಿ, ಕನ್ನಡತಿಯ ಮಂಕುದಿಣ್ಣೆ (ಎಂಡಿ) ಸಾನಿಯಾ, 'ಗೀತಾ'ದ ಭಾನುಮತಿ, 'ರಾಮಾಚಾರಿ'ಯ ಮಾನ್ಯತಾ, ಮಂಥರೆಯಂತೆ ಬಿಂಬಿಸಿಕೊಳ್ಳುತ್ತಾರೆ. 'ಒಲವಿನ ನಿಲ್ದಾಣ'ದ ಪಾಲಾಕ್ಷ ಶಕುನಿ ಮಾಮನಂತೆ ಅನ್ನಿಸುತ್ತಾರೆ. ಇಂತಹ ಧಾರಾವಾಹಿಗಳನ್ನು ನೋಡಲು ಬೇಸರವಾಗುತ್ತದೆ.

—ಬಿ. ಚಾಮರಾಜ ಅರಸ್, ಮೈಸೂರು

## ಬೋರಾಗದೆ ಸಾಗಲಿ 'ಶುಭಮಸ್ತು'

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಸದ್ಯ ಚೆನ್ನಾಗಿ ಮೂಡಿ ಬರುತ್ತಿದೆ. ಸುಧಾರಾಣಿಯವರ ಪಾತ್ರ ಅವರಿಗೆ ತುಂಬಾ ಮ್ಯಾಚ್ ಆಗಿದೆ. ತುಳಸಿ ಮತ್ತು ಮಾಧವ ಸರ್ ಭೇಟಿಗಾಗಿ ಕಾಯುತ್ತಿದ್ದೇವೆ. ವಿಭಿನ್ನ ವಿಷಯ–ವಸ್ತು ಆದ್ದರಿಂದ ಕಥೆ ಇಷ್ಟವಾಗುತ್ತದೆ. ಹೀಗೆ ಬೋರಾಗದಂತೆ ಧಾರಾವಾಹಿ ಸಾಗಲೆಂದು ಹಾರೈಸುತ್ತೇವೆ.

—ನಿಂಗಮ್ಮ ಭಾವಿಕಟ್ಟಿ, ಹುನಗುಂದ

## ಚಂದ್ರು ಸ್ಪೆಷಲ್! ಆಫ್ರಿಕಾದಲ್ಲಿ ಕರ್ನಾಟಕದ ಭೋಜನ



ಸ್ಟಾರ್ ಸುವರ್ಣದಲ್ಲಿ ಸಿಹಿಕಹಿ ಚಂದ್ರು ಅವರ 'ಬೊಂಬಾಟ್ ಭೋಜನ'ದಲ್ಲಿ ನವೀನ ಪ್ರಯೋಗವನ್ನು ಮಾಡುತ್ತಿದ್ದಾರೆ. ಈ ಬಾರಿ ಆಫ್ರಿಕಾದಲ್ಲಿ ನಡೆಸಿರುವ ಪ್ರಯತ್ನಕ್ಕೆ ಶಹಬ್ಬಾಸ್ ಹೇಳಲೇಬೇಕು. ನೈಜೀರಿಯಾ, ನೈರೋಬಿ ಕಾಡು ಸುತ್ತಾಡುತ್ತಾ ಅಲ್ಲಿನ ಕಿರು ಪರಿಚಯವನ್ನೂ ಮಾಡುತ್ತಿದ್ದಾರೆ. ಇದರ ಜೊತೆಗೆ ಅನಿವಾಸಿ ಕನ್ನಡಿಗರ ಮನೆಗಳಿಗೆ ಭೇಟಿ ನೀಡುವುದು ನಿಜಕ್ಕೂ ಸಂತಸದ ಸಂಗತಿ.

ಸ್ಥಳೀಯ ನಿವಾಸಿಗಳನ್ನು ಆಹ್ವಾನಿಸಿ ಅವರಿಗೆ ಭಾರತೀಯ ಆಹಾರ ಉಣಬಡಿಸಿದ ಪರಿ ಅನನ್ಯ. ಅಡುಗೆಯನ್ನೂ ಮಾಡುತ್ತಾ, ಚುಟುಕು ಕವನಗಳನ್ನೂ ಹೇಳುತ್ತಾ ನಗಿಸುವ ಚಂದ್ರು ಈ ಬಾರಿ ವಿಭಿನ್ನ ರೀತಿಯಲ್ಲಿ 'ಬೊಂಬಾಟ್ ಭೋಜನ'ವನ್ನು ವೀಕ್ಷಕರಿಗೂ ಉಣಬಡಿಸಿದ್ದು ಮೆಚ್ಚತಕ್ಕದ್ದು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಲಿಂಗಪ್ರಜ್ಞೆ ಬೇಕೆಂದಾಗ ಜಾಗೃತಗೊಳ್ಳುತ್ತದೆಯೆ?

'ಬಿಗ್ ಬಾಸ್' ಶೋನಲ್ಲಿ ಸ್ಪರ್ಧಿಗಳು ಆಡುವಾಗ ಒಬ್ಬರ ಮೇಲೊಬ್ಬರು ಬಿದ್ದು, ತಳ್ಳಿ ಆಡಿದ್ದನ್ನು ನೋಡಿದ್ದೇವೆ. ಹೀಗಿರುವಾಗ, ಹಿಂದಿನ ವಾರದ ಸಂಚಿಕೆಯಲ್ಲಿ ಕ್ಯಾಪ್ಟನ್ ಆಗಿದ್ದ ರೂಪೇಶ್ ರಾಜಣ್ಣ, ಅಮೂಲ್ಯಾ ಮತ್ತು ದೀಪಿಕಾ ಅವರ ಹತ್ತಿರ 'ನೀವು ಆಟವಾಡಿದ್ದು ತಪ್ಪು. ಆಟದ ನಿಯಮ ಮೀರಿದ್ದೀರಿ' ಅಂತ ಹೇಳಿದರು. ಆದರೆ ಅದಕ್ಕೆ ಆಕ್ಷೇಪಣೆ ಎತ್ತಿದ್ದು ದಿವ್ಯಾ. 'ರಾಜಣ್ಣ, ನೀವು ಹುಡುಗರ ಹತ್ತಿರ ಜಗಳವಾಡುವ ಹಾಗೆ ಹುಡುಗಿಯರ ಹತ್ತಿರ ತೀರಾ ಸಮೀಪದಲ್ಲಿ ನಿಂತು ಮಾತನಾಡಿದ್ದು ತಪ್ಪು' ಇದು ದಿವ್ಯಾ ವಾದ ಮಾಡಿದರು. ಇದಕ್ಕೆ ದೀಪಿಕಾ ದನಿಗೂಡಿಸಿದರು. ಇವರ ಸಂವಾದವನ್ನು ಕೇಳುತ್ತಿದ್ದ ನಮಗೆ ತುಂಬಾ ಆಶ್ಚರ್ಯವಾಯಿತು. ಬೇರೆ ಸಮಯದಲ್ಲಿ ಹುಡುಗರ ಜೊತೆ ಸಲಿಗೆಯಿಂದಿರುವ, ಮೈ–ಕೈ ಮುಟ್ಟದೆ ಮಾತನಾಡಲು ಗೊತ್ತೇ ಇಲ್ಲದಿರುವ ಈ ಹುಡುಗಿಯರಿಗೆ ಈಗ ಮಾತ್ರ ತಾವು ಹುಡುಗಿಯರೆಂಬುದು ಗಮನಕ್ಕೆ ಬಂತಲ್ಲಾ ಎಂಬುದೇ ಸೋಜಿಗ.

—ಪುಷ್ಪಾ ಎನ್.ಕೆ. ರಾವ್

## ವೈದ್ಯರಿಗೆ ನಮಸ್ಕಾರ

ಝೀ ಕನ್ನಡದ 'ಸರಿಗಮಪ' ಲಿಟ್ಲ್ ಚಾಂಪ್ಸ್ ಬಹಳ ಸೊಗಸಾಗಿ ಮೂಡಿಬರುತ್ತಿದೆ. ಸ್ಪರ್ಧಿಗಳು ಒಬ್ಬರಿಗಿಂತ ಒಬ್ಬರು ಚೆನ್ನಾಗಿ ಹಾಡುತ್ತಿದ್ದಾರೆ. ಪುಟಾಣಿಗಳು ತಮ್ಮ ಹಾಡು, ಮಾತಿನಿಂದ ರಂಜಿಸುತ್ತಿದ್ದಾರೆ. ಸ್ಪರ್ಧಿಗಳಲ್ಲೊಬ್ಬರಾದ ಪ್ರವೀಣ್ ಶೇಟ್ ಅವರ ದೃಷ್ಟಿದೋಷಕ್ಕೆ ನಾರಾಯಣ ನೇತ್ರಾಲಯದ ವೈದ್ಯರು ಉಚಿತವಾಗಿ ಚಿಕಿತ್ಸೆ ಕೊಡುವುದಾಗಿ ಹೇಳಿರುವುದು ಸಂತಸದ ವಿಷಯ. ವೈದ್ಯರಿಗೆ ಗೌರವಪೂರ್ವಕ ನಮಸ್ಕಾರಗಳು.

—ಕೆ.ಎಸ್. ಸವಿತ, ಬೆಂಗಳೂರು

## ಹಳಿ ತಪ್ಪಿದ 'ರಾಮಾಚಾರಿ'

ಆರಂಭದಲ್ಲಿ ಭರವಸೆ ಮೂಡಿಸಿದ ಕಲರ್ಸ್ ಕನ್ನಡದ 'ರಾಮಾಚಾರಿ' ಇತ್ತೀಚೆಗೆ ಹಳಿ ತಪ್ಪುತ್ತಿದೆ. ಸೊಸೆಯ ಮರಣದ ಸುದ್ದಿ ತಿಳಿದರೂ ನಾರಾಯಣಾಚಾರಿ ಮನೆಗೆ ಮರಳದಿರುವುದು ಒಂದು ಯಕ್ಷಪ್ರಶ್ನೆ. ತನ್ನ ಅತ್ತಿಗೆಯ ಸಾವಿನ ಸೇಡನ್ನು ತೀರಿಸಿಕೊಳ್ಳಬೇಕೆಂದು ಬಯಸಿರುವ ರಾಮಾಚಾರಿ ಮಾನ್ಯತಾ ಹಾಗೂ ಚಾರುವನ್ನು ಬಂಧಿಸಿಟ್ಟು ಹೆದರಿಸುತ್ತಾನೆ. ನಾನಾ ಬಗೆಯ ಯಂತ್ರಗಳನ್ನು ಹೊಂದಿರುವ ಸುಸಜ್ಜಿತ ಗೋದಾಮು ರಾಮಾಚಾರಿಗೆ ಹೇಗೆ ದೊರಕಿತು?

—ಮುರಲೀಧರ ಕುಲಕರ್ಣಿ, ಬೀದರ್

## ನಗ್ನ ಸತ್ಯ

ಮೂರ್ಖರ ಪೆಟ್ಟಿಗೆಯ
ಚರ್ಚೆಯಲ್ಲಿ
ಪಾಲ್ಗೊಳ್ಳುವವರಿಗೆ
ಕಡ್ಡಾಯವಾಗಿ
ಇರಲೇ ಬೇಕು
ಗಟ್ಟಿಯಾದ
ಧ್ವನಿಪೆಟ್ಟಿಗೆ!

—ಪಿ.ಜೆ. ರಾಘವೇಂದ್ರ
ಮೈಸೂರು

## ಹೊಸತಿನ ಬೆಸುಗೆ

ವ್ಯವಸ್ಥೆಯ ವಿರುದ್ಧ ಚಾಟಿ ಬೀಸುವ, ಹರಿತ ಸಂಭಾಷಣೆಯಿಂದಲೇ ಜನಪ್ರಿಯವಾಗಿರುವ ಧಾರಾವಾಹಿ ಸಿರಿ ಕನ್ನಡ ವಾಹಿನಿಯ 'ಯುಗಾಂತರ'ದಲ್ಲಿ ಸದಾಶಿವರಾಯರು ಯೌವನದಲ್ಲಿ ಮಾಡಿದ ಯಡವಟ್ಟುಗಳಿಂದ ವೃದ್ಧಾಪ್ಯದಲ್ಲಿ ದೈನೇಸಿ ಬದುಕು ಎದುರಿಸುತ್ತಿದ್ದಾರೆ. ಅರುಂಧತಿಯ ಅಮ್ಮ–ಅಪ್ಪನ ಪರಿಸ್ಥಿತಿ ಕನಿಕರ ಮೂಡಿಸುತ್ತದೆ. ಅವರ ಕ್ರಿಯೆಗೆ ಕಿರಿಯರ ಪ್ರತಿಕ್ರಿಯೆ ಸ್ವಾಭಾವಿಕ. ಆದರೂ ಅರುಂಧತಿ, ವಸುಧಾ, ವರ್ಷಾ ಅವರ ಮಾತು ಕ್ರೂರ ಎನಿಸುತ್ತದೆ. ಕೆಲವು ನಟರು ಯಾಂತ್ರಿಕವಾಗಿ ಸಂಭಾಷಣೆ ಒಪ್ಪಿಸುತ್ತಾರೆ. ದಿವ್ಯಾ ಕಾರಂತ ಯಾವಾಗಲೂ ಕೋಪದಿಂದಿರುತ್ತಾರೆ. ಸಣ್ಣ ಪಾತ್ರವಾದರೂ ದೀಪಾ ಲವಲವಿಕೆಯಿಂದ ನಟಿಸಿದ್ದಾರೆ. ಹೊಸತನದಿಂದ ಕೂಡಿರುವ ಧಾರಾವಾಹಿ ಮನರಂಜಿಸುವಂತಿದೆ.

—ಗೀತಾ ನೆಲ್ಲೀಕಾಯಿ

## ಟೀವಿ ನೋಡಿ ಚಿನ್ನ ಗೆದ್ದೆ

ಕೆಲವರು ಟೀವಿಯನ್ನು ಮೂರ್ಖರ ಪೆಟ್ಟಿಗೆ ಎಂದರು. ನಮ್ಮ ಮನೆಯ 'ಸುಧಾ' ಜಾಣರ ಪೆಟ್ಟಿಗೆ ಎಂದು ಹೆಸರಿಟ್ಟು ವಿಚಾರ ವಿಮರ್ಶೆಗೆ ಅವಕಾಶ ಮಾಡಿದೆ. ಅಲ್ಲಿ ಟೀವಿ ವೀಕ್ಷಕ ಮೂರ್ಖತನವಲ್ಲ ಜಾಣ ಎಂದು ತೋರಿಸಿದ್ದಾರೆ.

'ಟೀವಿ ನೋಡಿ ಚಿನ್ನ ಗೆಲ್ಲಿ' ಎಂಬ 'ದಿಗ್ವಿಜಯ' ವಾಹಿನಿಯ ಪ್ರಚಾರಕ್ಕೆ ಆಕರ್ಷಿತಳಾಗಿ ಒಂದು ಪ್ರಯತ್ನ ಮಾಡಿದೆ. ಅದೆಷ್ಟೋ ಧಾರಾವಾಹಿಗಳನ್ನು ವರ್ಷಗಟ್ಟಲೆ ನೋಡಿದರೂ ಮುಗಿಯುವ ಲಕ್ಷಣ ಕಾಣಿಸುತ್ತಿಲ್ಲ. ಅದರ ಬದಲು ದಿಗ್ವಿಜಯ ನೋಡಲು ಮುಂದಾದೆ. ಪ್ರತಿ ದಿನ ಅವರು ಕೇಳುವ 2 ಪ್ರಶ್ನೆಗಳಿಗೆ ಸರಿ ಉತ್ತರ ನೀಡಿ ಚಿನ್ನದ ನಾಣ್ಯ ಗೆದ್ದೆ.

—ಅನುರಾಧ ಟಿ., ದಾವಣಗೆರೆ